ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಗುಲಾಬಿ ಹೂವಿನ ಸುತ್ತ ಮುಳ್ಳುಗಳು ಏಕೆ ಇವೆ?



ಅದು ಸಸ್ಯಮ್ಮ ಸುಂದರ ಮಗಳನ್ನು ಕಾಯಲಿರಿಸಿದ ಸೆಕ್ಯುರಿಟಿ ಗಾರ್ಡ್.

ಹೆಚ್.ಎಂ. ಚನ್ನವೀರಯ್ಯ, ಹೂವಿನಹಡಗಲಿ
ಸತ್ಯ ಹೇಳಲು ಧೈರ್ಯ ಬೇಕೋ, ಸುಳ್ಳು ಹೇಳಲು ಧೈರ್ಯ ಬೇಕೋ?
ಸತ್ಯ ಹೇಳಲು ಆತ್ಮಸಾಕ್ಷಿ ಬೇಕು; ಸುಳ್ಳು ಜಯಿಸಿಕೊಳ್ಳಲು ವಕೀಲರ ಸಖ್ಯ ಬೇಕು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಟ್ರಾಫಿಕ್ ಸಿಗ್ನಲ್‌ನಲ್ಲಿ ಪ್ರೀತಿಯ ಆಫರ್ ಮಾಡಿದರೆ?
ಟ್ರಾಫಿಕ್ ಜ್ಯಾಮ್ ಮಾಡಿದನೆಂದು ಅನೇಕರಿಂದ ಪೊಲೀಸ್ ಸಂಸ್ಕೃತದಲ್ಲಿ ಆಶೀರ್ವಾದ.

ಮೈಸೂರು ಕುಸುಮ, ಶ್ರವಣಬೆಳಗೊಳ
ಪುಸ್ತಕಕ್ಕಿಂತ ಒಳ್ಳೆಯ ಮಿತ್ರ ಸಿಗಲು ಸಾಧ್ಯವಿಲ್ಲ. ಏನಂತೀರಿ?



ಅದು ಮಾವನ ಸೈನ್ ಹಾಕಿದ ಚೆಕ್ ಪುಸ್ತಕವಾದರಂತೂ...

ಭಾರತೀ ಗಂಗಾಧರ್, ಬೆಂಗಳೂರು
ಜೀಪೇ, ಫೋನ್‌ಪೇ ಬಂದಮೇಲೆ ಪತಿಯ ಜೇಬಿಂದ ನೋಟು ಹಾರಿಸುವುದರಿಂದ ನನ್ನಂಥವರು ವಂಚಿತರಾದೆವಲ್ಲ?
ಅಪ್ಡೇಟ್ ಆಗಿ ಪಾಸ್‌ವರ್ಡ್ ಪಡೆದು ಖಾತೆಗೆ ವರ್ಗಾಯಿಸಿಕೊಳ್ಳಿ.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು
ಕೊಚ್ಚೆಯೆಂದು ಅರಿತರೂ ಕಲ್ಲೆಸೆಯಬೇಕೆ?
ಸನಿಹದ ಡ್ರೈಕ್ಲೀನರ್ಸ್ ಬದುಕಲು ಅದು ಅವಶ್ಯ!

ಜೀವಿ, ಗೊಂಡೇದಹಳ್ಳಿ
ತಾಯಿ ಮಗನ ಹಸಿದ ಹೊಟ್ಟೆ ನೋಡುವಳು; ಹೆಂಡತಿ ಗಂಡನ ಜೇಬನ್ನು; ಮಗಳು?
ಅವೆಲ್ಲ ಅಂದಿನದು. ಈಗ ಯಾರೇ ಬಂದರೂ ಎಲ್ಲರೂ ತಮ್ಮತಮ್ಮ ಮೊಬೈಲು, ಲ್ಯಾಪ್‌ಟಾಪನ್ನೇ ನೋಡುವರು.

ಮಲ್ಲಿಕಾರ್ಜುನ, ಸುರಧೇನುಪುರ
ಭೂಮಿಗೆ ಬರುವಾಗ ಅತಿಥಿ; ಹೋದಮೇಲೆ ತಿಥಿ. ನಡುವೆ?
ಅವರಿವರ ತಿಥಿಯ ವಡೆ, ಪಾಯಸಕ್ಕೆ ರೆಡಿ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಸವಕಲು ನಾಣ್ಯ ಇರೋದು ನಿಜ. ಆದರೆ ಸವಕಲು ಕಾನೂನು ಎಂದರೇನು?
ಭ್ರಷ್ಟತೆಯ ರಭಸಕ್ಕೆ ಸಿಲುಕಿ ಕಾನ್(ಕಿವಿ) ಊನವಾದ ಕಾನೂನು.

ವಿ. ಹೇಮಂತಕುಮಾರ್, ಬೆಂಗಳೂರು
ಅನ್ನ ಹಾಕಿದ ಮನೆ, ಗೊಬ್ಬರ ಹಾಕಿದ ಹೊಲ ಯಾವತ್ತೂ ಹಾಳಾಗದಲ್ಲವೆ?
ಗುಣ, ಹದ ಅರಿತು ಹಾಕಿದರೆ ಮಾತ್ರ.

ಪಿ. ಜಯವಂತ ಪೈ, ಕುಂದಾಪುರ
ಪತಿಗೂ, ಚಪಾತಿಗೂ ವ್ಯತ್ಯಾಸವೇನು?
ಇವನು ಮನೆಯ ಕಾವಲಿಗೆ; ಅದು ಒಲೆಯ ಮೇಲಿನ ಕಾವಲಿಗೆ.

ಬಾ.ರಂ. ಸುರೇಶ್, ಶಿವಮೊಗ್ಗ
ಚುನಾವಣಾ ಫಲಿತಾಂಶಕ್ಕೂ, ಪರೀಕ್ಷೆಯ ಫಲಿತಾಂಶಕ್ಕೂ ವ್ಯತ್ಯಾಸ?
ಚುನಾವಣಾ ಫಲಿತಾಂಶದಲ್ಲಿ 2 ಫೇಲ್ ಆದವು ಸೇರಿ ಸಮ್ಮಿಶ್ರವಾಗಿ ಪಾಸ್ ಆಗಬಹುದು.

ದಿನೇಶ್, ಗುಡ್ಡದೂರು
ಚುನಾವಣೆಗೆ ಸ್ಪರ್ಧಿಸಲು ಸಿಗುವ ಟಿಕೆಟ್‌ಗೂ, ಸಿನಿಮಾ ಟಿಕೆಟ್‌ಗೂ ಇರುವ ವ್ಯತ್ಯಾಸ?
ಆ ಟಿಕೆಟ್ ಸಿಕ್ಕಿದರೂ ಹಾಲ್ ಪ್ರವೇಶಿಸಲು ಮತ್ತಷ್ಟು ಖರ್ಚು, ಶ್ರಮ ಅಗತ್ಯ.

ಮಹಾವೀರ ಕಾಸರ, ಶಿವಮೊಗ್ಗ
ಪಿತೃಪಕ್ಷ ಇದೆ; ಮಾತೃಪಕ್ಷ ಏಕಿಲ್ಲ?
ಇದೆಯಲ್ಲ! ಕಾಂಗ್ರೆಸ್ ಮಾತೃಪಕ್ಷವೇ.

## ಬಹುಮಾನಿತ ಪ್ರಶ್ನೆ

ಜಿ. ಪ್ರದೀಪಕುಮಾರ್, ಹೂವಿನಹಡಗಲಿ
ವಿಕೃತ ಚಿಂತನೆಯ ಕಪಟ ಅಧ್ಯಾತ್ಮವಾದಿಗಳ ನಡುವೆ ಪರಿಶುದ್ಧ ಜೀವನ ನಡೆಸುವುದು ಹೇಗೆ?
ಇಯರ್ ಫೋನ್ ಹಾಕಿಕೊಂಡು ಒಳಧ್ವನಿಗೆ ಆದ್ಯತೆ ನೀಡಿ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಹೀರೊ ವೃದ್ಧನಾದರೂ ಹೀರೋನೇ. ಹೀರೋಯಿನ್ ವಯಸ್ಸಾದಂತೆ ಹೀರೋಯಿನ್ ಆಗಳೇಕೆ?
ಹೀರೊ ಖರ್ಜೂರ; ಒಣಗಿದರೂ ದರ. ಹೀರೋಯಿನ್ ಮಾವು. ರಸಗಳೆದರೆ ಅನಾದರ.

ಎಂ.ಸಿ. ಧನ್ಯತಾ, ಬೆಂಗಳೂರು
ಪಿಶಾಚಿಗೂ, ಧನಪಿಶಾಚಿಗೂ ವ್ಯತ್ಯಾಸವೇನು?
ನಿವಾಸದ್ದೇ – ಇದರದು ಭೂತಬಂಗಲೆ; ಅದರದು ಭವ್ಯ ಬಂಗಲೆ.

ಪಿ. ಗೋವಿಂದರಾಜ್, ಶಿವಮೊಗ್ಗ
ತುಂಟಾಟಕ್ಕೂ, ತರ್ಲೆ ಆಟಕ್ಕೂ ವ್ಯತ್ಯಾಸವೇನು?



ಹುಡುಗಿಯ ಜಡೆ ಎಳೆದಾಗ ಅವಳು ನಕ್ಕರೆ ತುಂಟಾಟ; ಕೋಪಗೊಂಡರೆ ತರ್ಲೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
'ಅಮೃತವೂ ವಿಷ' ಆಗುವುದು ಯಾವಾಗ?
ಕೆಟ್ಟ ಅಡುಗೆಯವನ ಕೈಯಲ್ಲಿ ಹೊಸರುಚಿಯಾಗಿ ಮೂಡಿದಾಗ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ವಿಧವೆಯರೂ ಮುತ್ತೈದೆಯರಾಗುತ್ತಿರುವುದು ಏನನ್ನು ಸೂಚಿಸುತ್ತದೆ?
ಮೌಢ್ಯದ ಕಲ್ಲು ಕರಗಿ ಮಾನವೀಯತೆಯ ಜಲ ಸ್ಫುರಿಸಿದೆಯೆಂದು.

■ ರಾಮ್